ಹಿಡಿಯುವುದಕ್ಕೆ ಆಗುತ್ತದೆ? ಪೋಲೀಸ್‌ನವರು ಜೀಪ್‌ನ್ನು ತಳ್ಳಿಕೊಂಡು ಕುಳಿತುಕೊಂಡರೆ ಇವರು ಕಳ್ಳರನ್ನು, ಖದೀಮರನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀವು ಪರಿಣಾಮಕಾರಿಯಾಗಿ ಪ್ರತಿ ಸ್ಟೇಷನ್‌ಗಳಿಗೆ ಒಳ್ಳೆಯ ವಾಹನಗಳನ್ನು ಮತ್ತು ಒಳ್ಳೆಯ ಶಸ್ತ್ರಾಸ್ತ್ರ ಕೊಡದೆ ಸುಮ್ಮನೆ ಇಲ್ಲಿ ಉದ್ದುದ್ದವಾದ ಭಾಷಣ ಮಾಡಿದರೆ ಏನೂ ಆಗುವುದಿಲ್ಲ. ಆದ್ದರಿಂದ ನಿಮ್ಮಲ್ಲಿ ಕೆಟ್ಟಿರತಕ್ಕಂಥ ಎಲ್ಲಾ ವಾಹನಗಳನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆದು ಹೊಸ ವಾಹನಗಳನ್ನು ಕೊಡತಕ್ಕಂಥದ್ದನ್ನು ತಾವು ಜಾರಿ ಮಾಡುತ್ತೀರಾ ಎಂಬುದನ್ನು ದಯವಿಟ್ಟು ಹೇಳಬೇಕು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಹೈದರಾಲಿ ಇದ್ದದ್ದು 1750, 1760ರ ಸಾಲಿನಲ್ಲಿ ಮತ್ತು 1799ರಲ್ಲಿ ಟಿಪ್ಪು ಸುಲ್ತಾನ್ ಸತ್ತು ಹೋದ. ಆ ಕಾಲದಲ್ಲಿ ವಾಹನಗಳನ್ನು ಇನ್ನೂ ಕಂಡು ಹಿಡಿದಿರಲಿಲ್ಲ. ಆದ್ದರಿಂದ ಅವತ್ತಿನ ಕಾಲದ ವಾಹನಗಳನ್ನು ಇಟ್ಟುಕೊಳ್ಳತಕ್ಕಂಥ ಪ್ರಶ್ನೆ ಬರುವುದಿಲ್ಲ. ಆ ಕಾಲದಲ್ಲಿ ಎತ್ತಿನ ಗಾಡಿಗಳು ಇದ್ದವು.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಸಚಿವರೆ, ಆ ಕಾಲದ ವಾಹನಗಳು ಇದ್ದರೆ ಅವುಗಳನ್ನು ಸಂರಕ್ಷಿಸಬೇಕು.

ಶ್ರೀ ಹೆಚ್. ಆಂಜನೇಯ : ಆ ಕಾಲದಲ್ಲಿ ಕೇವಲ ಕುದುರೆಗಳು ಮಾತ್ರ ಇದ್ದವು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರು ಈಗ ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಉತ್ತಮವಾದಂಥ ಸಲಹೆಗಳಾಗಿವೆ. ಇವುಗಳನ್ನು ನವೀಕರಣಗೊಳಿಸಬೇಕಾಗಿರುವುದಕ್ಕೆ ನಮ್ಮ ಹತ್ತಿರ ಹಣ ಇದೆ. ಆದ್ದರಿಂದ ಇದರ ಬಗ್ಗೆ ಪ್ರತಿಯೊಂದು ಕಡೆ ಗಮನಹರಿಸುತ್ತೇವೆ. ಮಾನ್ಯ ಸಂಗಮೇಶ್ವರರವರು ಪ್ರಶ್ನೆ ಕೇಳಿದ್ದಾರೆ. ಅವರು ಕೇಳಿರತಕ್ಕಂಥ ಕಡೆ ಹೊಸ ಜೀಪ್‌ನ್ನು ಕಳುಹಿಸಿಕೊಡತಕ್ಕಂಥ ಕೆಲಸ ಮಾಡುತ್ತೇವೆ. ಮತ್ತೆ ತಾವೆಲ್ಲರೂ ಕೂಡ ಈ ವಿಷಯ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ ಎಲ್ಲಾ ಕಡೆ ಬದಲಾವಣೆ ಮಾಡತಕ್ಕಂಥ ಕೆಲಸವನ್ನು ನಾವು ಕೈಗೊಳ್ಳುತ್ತೇವೆ.

ವಿಷಯ: ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಗೆ ನೀಡಿದ ಎಸ್.ಎಫ್.ಸಿ. ಗ್ರ್ಯಾಂಟ್.

218(958) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2006–07ನೇ ಸಾಲಿನಲ್ಲಿ ಹುಬ್ಬಳ್ಳಿ– ಧಾರವಾಡ ಪಾಲಿಕೆಗೆ ನೀಡಿದ ಎಸ್.ಎಫ್.ಸಿ. ಗ್ರ್ಯಾಂಟ್ ಎಷ್ಟು: (ತಿಂಗಳುವಾರು ವಿವರ ನೀಡುವುದು):

ಅ) 2006–07ನೇ ಸಾಲಿನಲ್ಲಿ ಪಾಲಿಕೆಯಲ್ಲಿಯ ನಾಗರೀಕ ಸೌಲಭ್ಯಗಳನ್ನು ಒದಗಿಸಲಿಕ್ಕೆ ಬಿಡುಗಡೆ ಮಾಡಿದ ವಿಶೇಷ ಅನುದಾನವೆಷ್ಟು (ವಿವರ ನೀಡುವುದು);

ಇ) ಹುಬ್ಬಳ್ಳಿ–ಧಾರವಾಡ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ, ಗಟಾರ ಹಾಗೂ ಸ್ವಚ್ಛತೆ ಸರಿ ಇಲ್ಲದಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) 2006–07ನೇ ಸಾಲಿನಲ್ಲಿ ಎಸ್.ಎಫ್.ಸಿ. ಅನುದಾನದಿಂದ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ಇದುವರೆವಿಗೆ ಒಟ್ಟು ರೂ. 14.65 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ತಿಂಗಳುವಾರು ವಿವರ ಈ ಕೆಳಗಿನಂತಿದೆ:–

ತಿಂಗಳು	ಬಿಡುಗಡೆಯಾದ ಅನುದಾನ (ಕೋಟಿ ರೂ.ಗಳಲ್ಲಿ)
1) ಏಪ್ರಿಲ್ 2006	6.70
2) ಮೇ 2006	3.40
3) ಜೂನ್ 2006	4.55
ಒಟ್ಟು	14.65 ಕೋಟಿ ರೂ.

ಆ) ಮೇ 2006ರಲ್ಲಿ ರೂ. 50.00 ಲಕ್ಷ ವಿಶೇಷ ಅನುದಾನವನ್ನು ಕುಡಿಯುವ ನೀರು ಸರಬರಾಜು ಹಾಗೂ ಹೊಸ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದೆ.

ಇ) ಬಂದಿದೆ.

ಈ) ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಯನ್ನು 40 ವಾರ್ಡ್‌ಗಳಲ್ಲಿ ಗುತ್ತಿಗೆಗೆ ನೀಡಲಾಗಿದೆ. ಮತ್ತು ಕಸವನ್ನು 150 ಕಂಟೇನರ್‌ಗಳಲ್ಲಿ ಸಂಗ್ರಹಿಸಿ ಕಸ ತುಂಬುವ ಜಾಗಕ್ಕೆ ಸಾಗಿಸಲಾಗುತ್ತಿದೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಅಂಗಡಿ ಮಳಿಗೆಗಳಿಂದ ಬಾಗಿಲಿನಿಂದ–ಬಾಗಿಲಿಗೆ ಕಸವನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಿದೆ. ಮಾರುಕಟ್ಟೆಗಳು ಮತ್ತು ಮುಖ್ಯ ರಸ್ತೆಗಳಲ್ಲಿ ಸ್ವಚ್ಛತೆಯ ಕಾರ್ಯವನ್ನು ರಾತ್ರಿ ವೇಳೆಯಲ್ಲಿ ನಿರ್ವಹಿಸಲಾಗುತ್ತಿದೆ. ಮನೆಮನೆಯಿಂದ ಕಸವನ್ನು ಸಂಗ್ರಹಣೆ ಮಾಡುವ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಒಳಚರಂಡಿ ಮಾರ್ಗಗಳನ್ನು ಸ್ವಚ್ಛಗೊಳಿಸಲು ಮೂರು ಪ್ಯಾಕೇಜ್‌ಗಳಿಗೆ ಗುತ್ತಿಗೆ ನೀಡಲಾಗಿದೆ. ಹುಬ್ಬಳ್ಳಿಯಲ್ಲಿ ಶೇ.50ರಷ್ಟು ಮತ್ತು ಧಾರವಾಡದಲ್ಲಿ ಶೇ.40ರಷ್ಟು ಒಳಚರಂಡಿ ಮಾರ್ಗಗಳನ್ನು 40 ವರ್ಷಗಳ ಹಿಂದೆಯೇ ಮುಗಿಸಲಾಗಿದೆ. ಆದ್ದರಿಂದ ಈ ಮಾರ್ಗಗಳಲ್ಲಿ

ಜನಸಂಖ್ಯೆ ಹೆಚ್ಚಳದಿಂದ ಆಗಾಗ ಮಾರ್ಗಗಳು ಕಟ್ಟಿಕೊಳ್ಳುತ್ತಿರುತ್ತವೆ. ನಾಲೆಗಳು ಮತ್ತು ದೊಡ್ಡ ಮೋರಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಲು ಅವಶ್ಯಕ ಸಾಧನ ಸಲಕರಣೆ ಮತ್ತು ಮನುಷ್ಯ ಶಕ್ತಿಯೊಂದಿಗೆ ವಿಶೇಷ ಟಾಸ್ಕ್ ಫೋರ್ಸ್ ಅನ್ನು ರಚಿಸಲಾಗಿದೆ. ಒಂದು ಕಂಟ್ರೋಲ್ ಕೊಠಡಿ ಮತ್ತು ಸಹಾಯ ವಾಣಿಯನ್ನು ಸಹ ರಚಿಸಲಾಗಿದೆ.

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಎರಡು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಹುಬ್ಬಳ್ಳಿಗೆ ಬಂದು ಐ.ಟಿ. ಪಾರ್ಕ್‌ನ್ನು ಉದ್ಘಾಟನೆ ಮಾಡಿದರು. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಅಲ್ಲಿ ಮೂಲಭೂತ ಸೌಕರ್ಯಗಳಿಲ್ಲವೆಂದು ಐ.ಟಿ. ಸಂಸ್ಥೆಗಳು ಅಲ್ಲಿಗೆ ಬರುವುದಕ್ಕೆ ಹಿಂದೇಟು ಹಾಕಿದ್ದಾರೆ. ಈ ಐ.ಟಿ. ಪಾರ್ಕ್‌ನ್ನು ಮುಂದೆ ಬೆಳೆಸಬೇಕೆಂಬ ದೃಷ್ಟಿಯಿಂದ ಹಾಗೂ ನಗರಕ್ಕೆ ಮೂಲಭೂತ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಯೋಜನೆಗಳನ್ನು ತಾವು ಏನು ಹಾಕಿಕೊಂಡಿದ್ದೀರಿ, ಅವುಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದು ನನ್ನ ಮೊದಲ ಪ್ರಶ್ನೆ. ಹಾಗೆಯೇ ನನ್ನ ಎರಡನೇ ಪ್ರಶ್ನೆ ಏನೆಂದರೆ, ನಾನು ಎಸ್.ಎಸ್.ಸಿ. ಗ್ರ್ಯಾಂಟ್ ಬಗ್ಗೆ ಕೇಳಿದ್ದೆ. ಈಗಾಗಲೇ 14.65 ಕೋಟಿ ರೂ. ಮಂಜೂರು ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಆದರೆ, ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಗ್ರ್ಯಾಂಟ್ ಕೇವಲ 9 ಕೋಟಿ 50 ಲಕ್ಷ ರೂಪಾಯಿ ಮಾತ್ರ ಇದೆ. ಮತ್ತೆ ಉಳಿದ 5 ಕೋಟಿ ರೂಪಾಯಿ ಸಾಲವೆಂದು ನನಗೆ ಮಾಹಿತಿ ಬಂದಿದೆ. ಆದ್ದರಿಂದ ಆ 5 ಕೋಟಿ ರೂಪಾಯಿಗಳನ್ನು ಗ್ರ್ಯಾಂಟ್ ಎಂದು ಪರಿವರ್ತನೆ ಮಾಡುತ್ತೀರಾ ಎಂದು ತಮ್ಮ ಕಡೆಯಿಂದ ಇದಕ್ಕೆ ಉತ್ತರ ಬಯಸುತ್ತೇನೆ. ಮತ್ತೆ ನನ್ನ 3ನೇ ಪ್ರಶ್ನೆ ಏನೆಂದರೆ, ಬೇರೆ ಬೇರೆ ನಗರಗಳಿಗೆ ನೀವು ಬಹಳ ಮಹತ್ವವನ್ನು ಕೊಟ್ಟಿದ್ದೀರಿ. ವಿಶೇಷವಾಗಿ ಮೈಸೂರು ಮತ್ತೆ ತುಮಕೂರಿಗೆ ಮಹತ್ವ ಕೊಟ್ಟಿದ್ದೀರಿ. ಇವತ್ತಿನದಿವಸ ಬೆಂಗಳೂರು ಆದ ಮೇಲೆ ಹುಬ್ಬಳ್ಳಿ-ಧಾರವಾಡ ಎರಡನೇ ಮಹಾನಗರವಾಗಿದೆ. ಉತ್ತರ ಕರ್ನಾಟಕ ಅತೀ ದೊಡ್ಡ ಮಹಾನಗರವೆಂದರೆ ಅದು ಹುಬ್ಬಳ್ಳಿ-ಧಾರವಾಡ ಆಗಿದೆ. ಆದ್ದರಿಂದ ಈ ನಗರಗಳಿಗೆ ತಾರತಮ್ಯ ಏಕೆ ಮಾಡುತ್ತೀರೆಂದು ನಮ್ಮ ಮುಖ್ಯಮಂತ್ರಿಯವರ ಕಡೆಯಿಂದ ಇದಕ್ಕೆ ಉತ್ತರ ಬಯಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಕಳೆದ ಏಪ್ರಿಲ್ ತಿಂಗಳಿಂದ ಹುಬ್ಬಳ್ಳಿ-ಧಾರವಾಡ ನಗರದ ಅಭಿವೃದ್ಧಿಗೆ ಸುಮಾರು 14 ಕೋಟಿ 65 ಲಕ್ಷ ರೂಪಾಯಿಗಳ ಅನುದಾನವನ್ನು ಇವತ್ತು ಬಿಡುಗಡೆ ಮಾಡಿರುವ ಜೊತೆಗೆ

ವಿಶೇಷ ಅನುದಾನವಾಗಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಅದರಲ್ಲಿಯೂ ಕೂಡ ಪ್ರಮುಖವಾಗಿ ಒಳಚರಂಡಿ ಮಾರ್ಗಗಳು ಸುಮಾರು 40 ವರ್ಷಗಳ ಹಿಂದೆ ಏನೊಂದು ಕಾಮಗಾರಿಗಳನ್ನು ಮಾಡಲಾಗಿತ್ತೋ ಇದರಿಂದ ಈ ಒಂದು ವ್ಯವಸ್ಥೆಯಲ್ಲಿ ಇರತಕ್ಕಂಥ ತೊಂದರೆಗಳ ಬಗ್ಗೆ ವಿಶೇಷವಾದಂಥ ಗಮನವನ್ನು ಹರಿಸಿದ್ದೇವೆ. ಆ ಒಂದು ಭಾಗಕ್ಕೆ ಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳಿಗೋಸ್ಕರ ಹೆಚ್ಚಿನ ಅನುದಾನ ಕೊಡಬೇಕೆಂದು ಸನ್ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ. ಹುಬ್ಬಳ್ಳಿ ಧಾರವಾಡ ನಗರಗಳ ಅಭಿವೃದ್ಧಿಗೆ ಕಳೆದ ಏಪ್ರಿಲ್ ತಿಂಗಳಿಂದ 14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಒಂದು ಅಭಿವೃದ್ಧಿ ದೃಷ್ಟಿಯ ಬಗ್ಗೆ ಸರ್ಕಾರ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹುಬ್ಬಳ್ಳಿ ಧಾರವಾಡ ನಗರಕ್ಕೆ ಮೂಲಭೂತ ಸೌಕರ್ಯ ಕೊಡುವುದರ ಜೊತೆಗೆ ಅಲ್ಲಿನ ಅಭಿವೃದ್ಧಿಯ ದೃಷ್ಟಿಯಿಂದ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕಾಗಿರತಕ್ಕಂಥ ಸನ್ನಿವೇಶ ಬಂದಾಗ ಹಣವನ್ನು ಬಿಡುಗಡೆ ಮಾಡಿಸುವುದಕ್ಕೋಸ್ಕರ ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ ಈ ಒಂದು ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಹೆಚ್ಚಿನ ಗಮನಹರಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ 14 ಕೋಟಿ 65 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದರೆ ನನ್ನ ಮಾಹಿತಿ ಪ್ರಕಾರ 9 ಕೋಟಿ 65 ಲಕ್ಷ ರೂಪಾಯಿ ಗ್ರ್ಯಾಂಟ್ ಇದೆ. 5 ಕೋಟಿ ರೂಪಾಯಿ ಸಾಲವೆಂದು ನನಗೆ ತಿಳಿದು ಬಂದಿದೆ. ಆದ್ದರಿಂದ ಸಾಲವಾಗಿ ಕೊಟ್ಟಿರತಕ್ಕಂಥ 5 ಕೋಟಿ ರೂಪಾಯಿಗಳನ್ನು ಅನುದಾನವೆಂದು ಪರಿವರ್ತನೆ ಮಾಡುತ್ತೀರಾ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅಭಿವೃದ್ಧಿ ಕೆಲಸಕ್ಕೆ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ 5 ಕೋಟಿ ರೂಪಾಯಿ ಸಾಲದ ಹಣವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಆರ್ಥಿಕ ಇಲಾಖೆಯವರ ಜೊತೆ ಚರ್ಚೆಮಾಡುತ್ತೇನೆ. ಈಗ ಅಲ್ಲಿಗೆ 14.65 ಕೋಟಿ ರೂಪಾಯಿಗಳನ್ನು ಗ್ರ್ಯಾಂಟ್ ಎಂದು ಕೊಡಲಾಗಿದೆ. 5 ಕೋಟಿ ರೂ. ಹೆಚ್ಚಿನ ಹಣದ ಬಗ್ಗೆ ಸನ್ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ಹೆಚ್ಚುವರಿಯಾಗಿ ಸಾಲದ ರೂಪದಲ್ಲಿ ಕೊಡಲಾಗಿದೆ. ಅಂದರೆ 14.65 ಕೋಟಿ ರೂಪಾಯಿಗಳನ್ನು

ಅನುದಾನವಾಗಿ ಮತ್ತು ಇದರ ಜೊತೆಗೆ 5 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಸಾಲದ ಹಣವನ್ನಾಗಿ ಕೊಟ್ಟಿದ್ದೇವೆ.

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : 5 ಕೋಟಿ ರೂ. ಸೇರಿಸಿ 15.65 ಕೋಟಿ ರೂಪಾಯಿಗಳನ್ನು ಗ್ರ್ಯಾಂಟ್ ಎಂದು ಹೇಳುತ್ತಿದ್ದೀರಿ. ಆದರೆ ಅಲ್ಲಿನ ಮಾಹಿತಿ ಪ್ರಕಾರ 5 ಕೋಟಿ ರೂಪಾಯಿ ಸಾಲವೆಂದು ಇದೆ. ಆದ್ದರಿಂದ ಇದು ಕ್ಲಿಯರ್ ಆಗುತ್ತಿಲ್ಲ. ಆ 5 ಕೋಟಿ ರೂಪಾಯಿ ಕೂಡ ಅನುದಾನವೆಂದು ಹೇಳಿದರೆ ನಾನು ನಿಮಗೆ ಧನ್ಯವಾದವನ್ನು ಕೋರುತ್ತೇನೆ.

ಅಧ್ಯಕ್ಷರು : 14 ಕೋಟಿ ರೂಪಾಯಿ ಅನುದಾನವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ.

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : 14.65 ಕೋಟಿ ರೂಪಾಯಿ ಪೂರ್ಣಪ್ರಮಾಣದ ಅನುದಾನವಲ್ಲ. ಇದರಲ್ಲಿ 9 ಕೋಟಿ 65 ಲಕ್ಷ ರೂಪಾಯಿ ಅನುದಾನ 5 ಕೋಟಿ ರೂಪಾಯಿ ಸಾಲವೆಂದು ಇದೆ. ಆದ್ದರಿಂದ ಆ 5 ಕೋಟಿ ರೂಪಾಯಿಗಳನ್ನು ಅನುದಾನವೆಂದು ಪರಿಗಣಿಸುತ್ತೀರಾ ಎಂದು ನಾನು ಕೇಳುತ್ತಿದ್ದೇನಷ್ಟೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ–ಧಾರವಾಡ ಪಾಲಿಕೆಗೆ ನೀಡಿದ ಗ್ರ್ಯಾಂಟ್ 14.65 ಕೋಟಿ ರೂ.ಗಳು, 5 ಕೋಟಿ ರೂ.ಗಳನ್ನು ನೀವು ಹೇಳುವ ಪ್ರಕಾರ ಲೋನ್ ಮೂಲಕ ಕೊಟ್ಟಿರುತ್ತೇವೆ. ಬೇಕಾದರೆ ಇನ್ನು ಹೆಚ್ಚಿನ ಹಣ ಒದಗಿಸಲಾಗುವುದು.

ಶ್ರೀ ಎಸ್.ಎಸ್. ಪಾಟೀಲ್ : ಪಾಲಿಕೆಯಲ್ಲಿಯ ನಾಗರೀಕ ಸೌಲಭ್ಯಗಳ ಸಲುವಾಗಿ ಅನುದಾನ ತೊಂದರೆ ಇದೆ, ಹೆಚ್ಚಿಗೆ ಹಣ ಬಿಡುಗಡೆ ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇದರ ಬಗ್ಗೆ ನಾನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ: ಗದಗ ತಾಲ್ಲೂಕು ಲಕ್ಕುಂಡಿಯನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವುದು.

219(595) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗದಗ ತಾಲ್ಲೂಕು ಲಕ್ಕುಂಡಿಯನ್ನು ಪ್ರವಾಸೋದ್ಯಮದಲ್ಲಿ ಸೇರಿಸಲಾಗಿದೆಯೇ: